

# ಬಳುಕುವ ಬಾಲೆ





ಈ ಸುಂದರ ತರುಣಿಯನ್ನು ನೋಡಿ! ಬಳ್ಳಿ ಶರೀರ ಚಿತ್ರದಲ್ಲಿರುವ ಈ ಎಲ್ಲ ಭಂಗಿಗಳಲ್ಲಿ ತಾಸುಗಟ್ಟಲೆ ಇದ್ದರೂ ಆಕೆಗೆ ಆಯಾಸವಿಲ್ಲ. ಇಪ್ಪತ್ತೈದು ವಿಧಾನಗಳಲ್ಲಿ ಅವಳು ದೇಹವನ್ನು ಬಾಗಿಸಬಲ್ಲಳು, ತಿರುಚಬಲ್ಲಳು, ಹೀಗಿದ್ದುಕೊಂಡೇ ಚಹಾ ಕುಡಿಯಬಲ್ಲಳು. ಚದುರಂಗ ಆಟವನ್ನು ಆಡಬಲ್ಲಳು. ಹೀಗೆಯೇ 20 ಮೀಟರ್ ದೂರ ಚಲಿಸಲು ಅವಳಿಗೆ ಬೇಕಾಗುವುದು ಹತ್ತೂವರೆ ಸೆಕೆಂಡ್ ಗಳು ಮಾತ್ರ!

ಇವಳು ಫಿಲಿಪ್ಪೀನ್ಸ್ ದೇಶದ ಮೋಹಿನಿ. ಹೆಸರು ಲೈಲಾನಿ ಫ್ರಾಂಕೋ. ತನ್ನ ಆರನೆಯ ವಯಸ್ಸಿನಿಂದಲೇ ಶರೀರವನ್ನು ಎಲುಬುಗಳೇ ಇಲ್ಲವೇನೋ ಎಂಬಂತೆ ಬಾಗಿಸುವ ಅಭ್ಯಾಸ ಮಾಡಿದಳು. ನಿಮಿಷದಲ್ಲಿ 25 ಸಲ ಎದೆ ಬಡಿತವನ್ನು ನಿಲ್ಲಿಸಿ ಮತ್ತೆ ನಡೆಸಬಲ್ಲ ಸಾಧನೆಯನ್ನೂ ಈಕೆ ಕರಗತ ಮಾಡಿ ಕೊಂಡಿದ್ದಾಳೆ. ಈಗ ಇವಳೊಬ್ಬಳೇ ಜಗತ್ತಿನಲ್ಲಿ ಇಂಥ ಸಾಧನೆ ಮಾಡಬಲ್ಲಳೆಂಬುದನ್ನು ಗಿನ್ನಸ್ ದಾಖಲೆ ಒಪ್ಪಿಕೊಂಡಿದ್ದು, ಅವಳಿಗೆ ಪ್ರಮಾಣಪತ್ರವನ್ನೂ ನೀಡಿದೆ.

■ ಪ. ರಾಮಕೃಷ್ಣ ಶಾಸ್ತ್ರಿ

